ಗಂಗಾ ಕಲ್ಯಾಣ ಯೋಜನೆಯ ಬಗ್ಗೆ

೫೯೨. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಈವರೆಗೆ ಎಷ್ಟು ಘಟಕ ಪ್ರಾರಂಭಿಸಲಾಗಿದೆ ಹಾಗೂ ಫಲಾನುಭವಿಗಳು ಸಂಖ್ಯೆ ಎಷ್ಟು;

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಸ್ಥಾಪಿಸಿದ ಘಟಕಗಳ ಸಂಖ್ಯೆ ಎಷ್ಟು?

ಇ) ಹೊನ್ನಾವರ ಹಾಗೂ ಭಟ್ಕಳ ತಾಲ್ಲೂಕುಗಳಲ್ಲಿ ಎಷ್ಟು ಘಟಕ ಈವರೆಗೆ ಸ್ಥಾಪಿಸಲಾಗಿದೆ.

ಈ) ಈ ಯೋಜನೆಗೆ ಸರ್ಕಾರದವರು ಎಷ್ಟು ಹಣ ಖರ್ಚು ಮಾಡಿದ್ದಾರೆ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಪ್ರಾರಂಭಿಸಿರುವ ಯೋಜನೆಗಳು ... ೯೭೭
ಪೂರ್ಣಗೊಳಿಸಿರುವ ಯೋಜನೆಗಳು ೨೭೫
ಫಲಾನುಭವಿಗಳು ೩,೭೦೯ ಕುಟುಂಬಗಳು

ಆ) ೭ ಯೋಜನೆಗಳು ಪೂರ್ಣಗೊಂಡಿವೆ. ೨೫ ಯೋಜನೆಗಳು ಪ್ರಗತಿಯಲ್ಲಿವೆ.

ಇ) ಯಾವುದೂ ಇಲ್ಲ.

ಈ) ರಾಜ್ಯಾದ್ಯಂತ ೫೪೧.೨೮ ಲಕ್ಷ ರೂಪಾಯಿಗಳು.

ಹೀರೇ-ಬೈಲ್‌ನಿಂದ ಚಿಕ್ಕನಕೋಡಿಗೆ ರಸ್ತೆ ನಿರ್ಮಾಣ

೬೪೬. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊನ್ನಾವರ ತಿರೆ ಅಂಗಡಿ ಸಾಲಕೋಡ ದೊಡ್ಡಮನೆ ರಸ್ತೆಯು ಲೋಕೋಪಯೋಗಿ ರಸ್ತೆಯೇ;

ಆ) ಈ ರಸ್ತೆಗೆ ಎಷ್ಟು ಖರ್ಚಾಗಬಹುದೆಂದು ಅಂದಾಜು ಯೋಜನೆ ತಯಾರಿಸಲಾಗಿದೆ;

ಇ) ಸದರಿ ರಸ್ತೆಯಲ್ಲಿರುವ ಹಿರೇಬೈಲ್‌ನಿಂದ-ಚಿಕ್ಕನಕೋಡವರೆಗೆ ರಸ್ತೆ ಯೋಜನೆ ಇದೆಯೇ;

ಈ) ಇಲ್ಲದಿದ್ದಲ್ಲಿ, ಹಿರೇಬೈಲಿನಿಂದ-ಚಿಕ್ಕನಕೋಡವರೆಗೆ, ಎಮ್.ಎನ್.ಪಿ. ಯೋಜನೆಯಿಂದ ರಸ್ತೆ ನಿರ್ಮಿಸಲಾಗುವುದೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮಂತ್ರಿ ನೀರಾವರಿ ಸಚಿವರು).—

ಅ) ಈಗ ಇದು ಜಿಲ್ಲಾ ಪರಿಷತ್ತಿಗೆ ಸೇರಿದ ರಸ್ತೆಯಾಗಿದೆ.

ಆ) ಈ ರಸ್ತೆ ಅಭಿವೃದ್ಧಿಗೆ ೧ ಕೋಟಿ ರೂಪಾಯಿಗೆ ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿದೆ.

ಇ) ಜಿಲ್ಲಾ ವಲಯ ಯೋಜನೆಯಲ್ಲಿ ಹಿರೇಬೈಲ ಮೂಲಕ ಹಡಿನಬಾಳದಿಂದ ಜನಕ-ಡಕಲ್ಲಿಗೆ ಹೋಗಲು ರಸ್ತೆ ಕಾಮಗಾರಿಯು ಪ್ರಗತಿಯಲ್ಲಿದೆ.

ಈ) ಹಿರೇಬೈಲ ಚಿಕ್ಕನಕೊಡಿಗೆ ಹೋಗಲು ಜಿಲ್ಲಾವಲಯ ಯೋಜನೆಯಲ್ಲಿ ಬೆಂಗಳೂರು-ಹೊನ್ನಾವರ ಕಡೆಯಿಂದ ಜನಕದಕಲ್ಲ ಗ್ರಾಮಕ್ಕೆ ರಸ್ತೆ ನಿರ್ಮಿಸಿದ್ದು ಇದು ಚಿಕ್ಕನಕೊಡ ಗ್ರಾಮಕ್ಕೂ ರಸ್ತೆಯಾಗಿದೆ.